**ದಿನಾಂಕಃ 14-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃವಾದಿ ಪರ ಎಸ್ ಆರ್ ಎಂ ವಕೀಲರಿಂದ ಎ ಜಿ ವಕೀಲರ ಪರವಾಗಿಃ**

ಈ ದಾವೆಯನ್ನು ಸಲ್ಲಿಸಿರುವ ವಾದಿ ನನ್ನ ಅಕ್ಕನಾಗಬೇಕು. 1 ನೇ ಪ್ರತಿವಾದಿ ಸಹ ನನಗೆ ಹಿರಿಯ ಸಹೋದರಿಯಾಗಬೇಕು. ನನ್ನ ತಂದೆ ಮತ್ತು ತಾಯಿ ಹೆಸರು ಬಿ.ಸಿ. ನಂಜಪ್ಪ ಹಾಗೂ ಸಿ. ಮಂಜಮ್ಮ ಆಗಿರುತ್ತಾರೆ. ಅವರಿಬ್ಬರು ಈಗ ಮೃತಪಟ್ಟಿರುತ್ತಾರೆ. ಈ ದಾವೆಯನ್ನು ವಾದಿಯು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಸಮ ಭಾಗಾಂಶ ಕೋರಿ ಸಲ್ಲಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿನ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ವಾದಿಯವರು ತಮ್ಮ ವಾದ ಪತ್ರದಲ್ಲಿ ಹೇಳಿಕೊಂಡಿರುವ ವಿಚಾರಗಳು ನನಗೆ ತಿಳಿದಿವೆ ದಾವಾ ಆಸ್ತಿಗಳನ್ನು ನಾನು ನೋಡಿರುತ್ತೇನೆ. ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿಗಳಾದ ನಮ್ಮ ವಿವಾಹ ಆಗಿರುತ್ತದೆ. ವಾದಿ ಮತ್ತು 1 ನೇ ಪ್ರತಿವಾದಿಯ ವಿವಾಾಹವನ್ನು ನನ್ನ ತಂದೆಯವರು ಬದುಕಿದ್ದಾಗ ಮಾಡಿರುತ್ತಾರೆ. ನನ್ನ ವಿವಾಹವನ್ನು ನನ್ನ ತಾಯಿಯವರು ನನ್ನ ತಂದೆಯವರು ತೀರಿಕೊಂಡ ನಂತರ ಮಾಡಿರುತ್ತಾರೆ.

**(ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ